V.K. 26/12/16

### ಎಆರ್‌ಬಿಸಿಯಲ್ಲಿ 1 ಮೆ.ವ್ಯಾ. ಉತ್ಪಾದನೆ, ಯೋಜನೆ ವಿಸ್ತರಿಸಲು ಚಿಂತನೆ

# ಕಾಲುವೆಯ ಮೇಲೆ 'ಸೋಲಾರ್ ಚಪ್ಪರ'

■ **ಶಶಿಧರ ಹೆಗಡೆ** ಬೆಂಗಳೂರು

ನೀರಾವರಿ ಕಾಲುವೆಯ ಮೇಲೆ ಸೋಲಾರ್ ಪ್ಯಾನಲ್ ಅಳವಡಿಸಿ ವಿದ್ಯುತ್ ಉತ್ಪಾದಿಸುವುದರಲ್ಲಿ ಪ್ರಾಯೋಗಿಕ ಯಶಸ್ಸು ಸಿಕ್ಕಿದೆ. ಹಾಗಾಗಿ ದೊಡ್ಡ ಪ್ರಮಾಣದಲ್ಲಿ ಈ ಯೋಜನೆ ಕೈಗೆತ್ತಿಕೊಳ್ಳಲು ರಾಜ್ಯ ಸರಕಾರ ಚಿಂತನೆ ನಡೆಸಿದೆ.

ದೇಶದ ಸೋಲಾರ್ ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಗುಜರಾತ್ ಈ ವಿಚಾರದಲ್ಲಿ ಶೇ.60 ರಷ್ಟು ಪಾಲು ಹೊಂದಿದೆ. ನರ್ಮದಾ ಸೇರಿದಂತೆ ಅಲ್ಲಿನ ನೀರಾವರಿ ಕಾಲುವೆಗಳ ಮೇಲೆ ಸೋಲಾರ್ ಸಲಕರಣೆ ಹಾಕುವುದರ ಮೂಲಕ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ರಾಜ್ಯದಲ್ಲಿಯೂ ಇದೇ ಮಾದರಿ ಅನುಸರಿಸ ಲಾಗಿದ್ದು, ಈಗಾಗಲೇ ಆಲಮಟ್ಟಿ ಬಲದಂಡೆ ಕಾಲುವೆಯನ್ನು (ಎಆರ್‌ಬಿಸಿ) ಬಳಸಿಕೊಂಡು 1 ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ದಕ್ಷಿಣ ಭಾರತದ ಯಾವುದೇ ರಾಜ್ಯಗಳು ನೀರಾವರಿ ಕಾಲುವೆಗಳ ಮೇಲೆ 'ಸೋಲಾರ್ ಚಾವಣಿ' ನಿರ್ಮಿಸಿಲ್ಲ, ಹಾಗಾಗಿ ಈ ವಿಭಾಗದಲ್ಲಿ ದೂರದೃಷ್ಟಿಯ ಕ್ರಮ ಕೈಗೊಂಡಿರುವ ಶ್ರೇಯಸ್ಸು ಕರ್ನಾಟಕದ್ದಾಗಿದೆ. ಇದನ್ನು ಆಧರಿಸಿ ಕೊಪ್ಪಳ ಏತ ನೀರಾವರಿ ಕಾಲುವೆಯ ಮೇಲೆ ಸೋಲಾರ್ ವಿದ್ಯುತ್ ಉತ್ಪಾದಿಸುವ ಸಂಬಂಧ ರೂಪುರೇಷೆ ಸಿದ್ಧಪಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕೃಷ್ಣಾ ಸೇರಿದಂತೆ ಕಾವೇರಿ ಕಣಿವೆಯಲ್ಲೂ ಈ ಯೋಜನೆಗೆ ಹೆಚ್ಚಿನ ಪ್ರೋತ್ಸಾಹ ಸಿಗುವ ನಿರೀಕ್ಷೆಯಿದೆ.

ಏತ ನೀರಾವರಿ ಯೋಜನೆಗಳಿಗೆ ಅಗತ್ಯವಾದ ವಿದ್ಯುತ್ ಅನ್ನು ಜಲಸಂಪನ್ಮೂಲ ಇಲಾಖೆಯಿಂದಲೇ ಹೊಂದಿಸಿಕೊಳ್ಳುವುದು ಸೋಲಾರ್ ಯೋಜನೆಯ ಪ್ರಮುಖ ಉದ್ದೇಶ. ಜತೆಗೆ ಬೇಸಿಗೆ ವೇಳೆ ಕಾಲುವೆಯಲ್ಲಿನ ನೀರು ಆವಿಯಾಗುವುದನ್ನು ಇದು ತಡೆಗಟ್ಟಲಿದೆ ಎಂದು ಕೃಷ್ಣಾ ಭಾಗ್ಯ ಜಲ ನಿಗಮದ (ಕೆಬಿಜೆಎನ್‌ಎಲ್) ಅಧಿಕಾರಿಗಳು ಹೇಳುತ್ತಾರೆ.

**700 ಮೀಟರ್‌ಗೆ ಸೋಲಾರ್**

ಆಲಮಟ್ಟಿ ಬಲದಂಡೆ ಕಾಲುವೆ ಹಾಯ್ದು ಹೋಗುವಲ್ಲಿ ಬಾಗಲಕೋಟ ಜಿಲ್ಲೆಯ ಹುನಗುಂದದ ಬಳಿ 700 ಮೀಟರ್ ಉದ್ದಕ್ಕೆ 3280 ಸೋಲಾರ್ ಪ್ಯಾನಲ್ ಅಳವಡಿಸಲಾಗಿದೆ. ಸೋಲಾರ್ ಉಪಕರಣಗಳಿಗೆ 10.43 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇಲ್ಲಿನ ಸಬ್ ಸ್ಟೇಷನ್ ನಿರ್ಮಿಸಲು 1 ಕೋಟಿ ರೂ. ಖರ್ಚಾಗಿದೆ. ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಂಡ ಈ ಯೋಜನೆಯಿಂದ 2015 ರ ಏಪ್ರಿಲ್ 6 ರಂದು ವಿದ್ಯುತ್ ಉತ್ಪಾದನೆ ಪ್ರಾರಂಭವಾಗಿದೆ. ಈ ಭಾಗದಲ್ಲಿ ಮಳೆ ಕಡಿಮೆ ಇರುವುದರಿಂದ ಅಬಾಧಿತವಾಗಿ ವಿದ್ಯುತ್ ಉತ್ಪಾದನೆಯಾಗುತ್ತಿದೆ. 2015 ರ ಜೂನ್ 9 ರಿಂದ 2016 ರ ಮಾರ್ಚ್ 31 ರ ವರೆಗೆ 14 ಲಕ್ಷ ಯೂನಿಟ್ ಲಭ್ಯವಾಗಿದೆ: ನಾರಾಯಣಪುರ ವಲಯದ ಕೊಪ್ಪಳದಲ್ಲಿಯೂ ಈ ಯೋಜನೆ ಜಾರಿಗೆ ಇಲಾಖೆ ಹಂತದಲ್ಲಿ ಯತ್ನ ನಡೆದಿದೆ ಎಂದು ಈ ಯೋಜನೆ ಉಸ್ತುವಾರಿ ವಹಿಸಿಕೊಂಡಿದ್ದ ಹಾಗೂ ಹಾಲಿ ಕೃಷ್ಣಾ ಕಾಡಾ ಭೀಮರಾಯನಗುಡಿಯಲ್ಲಿ ಸೂಪರಿಂಟೆಂಡೆಂಟ್ ಎಂಜಿನಿಯರ್ ಆಗಿರುವ ಆರ್. ತಿರುಮೂರ್ತಿ ಸ್ಥಳದಲ್ಲಿ ಮಾಹಿತಿ ಒದಗಿಸಿದರು.

ಆರಂಭದಲ್ಲಿ ಹುನಗುಂದ ಸುತ್ತಲಿನ 12 ಹಳ್ಳಿಗಳಿಗೆ ವಿದ್ಯುತ್ ಪೂರೈಸಲು ಉದ್ದೇಶಿಸಲಾಗಿತ್ತು. ಬಳಿಕ ಈ ಪ್ರಸ್ತಾವ ಕೈಬಿಟ್ಟು ಆಲಮಟ್ಟಿ ಬಲ ಮತ್ತು ಎಡದಂಡೆ ಕಾಲುವೆ ಪಂಪಿಂಗ್‌ಗೆ ಬಳಸಿಕೊಳ್ಳಲಾಗುತ್ತಿದೆ. ಈ ಸಂಬಂಧ ಕೆಪಿಟಿಸಿಎಲ್ ಅನುಮತಿಯೊಂದಿಗೆ ರಾಂಪೂರ ಸಬ್ ಸ್ಟೇಷನ್‌ಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.



**ಏನಿದರ ವಿಶೇಷ?**

- ಜಲಸಂಪನ್ಮೂಲ ಇಲಾಖೆಗೆ ವಿದ್ಯುತ್ ಸ್ವಾವಲಂಬನೆ
- ಕಾಲುವೆ ನೀರು ಆವಿಯಾಗುವುದಕ್ಕೆ ತಡೆ
- ವರ್ಷದಲ್ಲಿ 14 ಲಕ್ಷ ಯೂನಿಟ್ ಲಭ್ಯ
- ಕೆಬಿಜೆಎನ್‌ಎಲ್‌ಗೆ ವಾರ್ಷಿಕ 43.55 ಲಕ್ಷ ರೂ. ಆದಾಯ



**ಕೊಪ್ಪಳದಲ್ಲಿ 10 ಮೆಗಾ ವ್ಯಾಟ್**

ಕೊಪ್ಪಳ ಏತ ನೀರಾವರಿ ಕಾಲುವೆಯ ಮೇಲೆ ಸೋಲಾರ್ ಪ್ಯಾನಲ್ ಅಳವಡಿಸಿ 10 ಮೆಗಾ ವ್ಯಾಟ್ ಉತ್ಪಾದಿಸಲು ಪ್ರಸ್ತಾವನೆ ಸಿದ್ಧಪಡಿಸಲಾಗುತ್ತಿದೆ. ಈ ಸಂಬಂಧ ಇಂಧನ ಇಲಾಖೆಯೊಂದಿಗೂ ಮಾತುಕತೆ ನಡೆಸಲಾಗುತ್ತಿದೆ. ಕೇಂದ್ರದ ನವೀಕರಿಸಬಹುದಾದ ಇಂಧನ ಮೂಲಗಳ ಇಲಾಖೆಯು 200 ಮೆಗಾ ವ್ಯಾಟ್ ಉತ್ಪಾದನೆಯ ಗುರಿಯನ್ನು ಕರ್ನಾಟಕಕ್ಕೆ ನೀಡಿದೆ. ಹಾಗಾಗಿ ಸೋಲಾರ್, ಪವನ ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಒತ್ತು ಕೊಡಬೇಕಿದೆ. ನೀರಾವರಿ ಕಾಲುವೆಗಳನ್ನು ಈ ಉದ್ದೇಶಕ್ಕೆ ಗರಿಷ್ಠ ಬಳಕೆ ಮಾಡಿಕೊಳ್ಳುವುದಕ್ಕೆ ಸಮಗ್ರ ಯೋಜನೆ ರೂಪಿಸುವತ್ತಲೂ ಚಿಂತನೆ ನಡೆಸಲಾಗಿದೆ ಎಂದು ಜಲಸಂಪನ್ಮೂಲ ಇಲಾಖೆ ಉನ್ನತ ಮೂಲಗಳು ತಿಳಿಸಿವೆ.

**ಮಾರಾಟಕ್ಕೂ ಅವಕಾಶ**

ಪ್ರತಿ ಯೂನಿಟ್ ವಿದ್ಯುತ್‌ಗೆ 3.06 ರೂ. ಅನ್ನು ಕೆಪಿಟಿಸಿಎಲ್ ನಿಗದಿ ಮಾಡಿದೆ. ಸದ್ಯ ದೊರಕುತ್ತಿರುವ ವಿದ್ಯುತ್, ಕಾಲುವೆಗಳ ಪಂಪಿಂಗ್‌ಗೆ ಸೀಮಿತವಾಗಿ ಬಳಕೆಯಾಗುತ್ತಿದೆ. ಹೆಚ್ಚುವರಿ ವಿದ್ಯುತ್ ಉತ್ಪಾದನೆಯಾದರೆ, ಕೆಪಿಟಿಸಿಎಲ್ ಕೊಂಡುಕೊಳ್ಳಲಿದೆ. ಈ ಯೋಜನೆಯಿಂದ ವಾರ್ಷಿಕ 43.55 ಲಕ್ಷ ರೂ. ಆದಾಯ ಕೆಬಿಜೆಎನ್‌ಎಲ್‌ಗೆ ಬರುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

---

**ಅರವತ್ತೇ ಅರವತ್ತು ಪದಗಳು**

ಕನ್ನಡ ಪ್ರಭ 26/12/16

### ಸಮಸ್ಯೆ ನೀಗಿಸಲು ಸೌರಶಕ್ತಿ

**ಬೆಂಗಳೂರು:** ವಿದ್ಯುತ್ ಸಮಸ್ಯೆ ನೀಗಿಸಲು ಸೌರಶಕ್ತಿ ಬಳಕೆ ಅತ್ಯಗತ್ಯ. ಗ್ರಾಹಕರು ಇದರ ಹೆಚ್ಚಿನ ಉಪಯೋಗ ಪಡೆದುಕೊಳ್ಳಬೇಕು ಎಂದು ನಿವೃತ್ತ ಅಬಕಾರಿ ಉಪ ಆಯುಕ್ತ ಗೋವಿಂದರಾಜು ಹೇಳಿದರು. ಆರ್ಬ್ ಎನರ್ಜಿ ಸೋಲಾರ್ ಸಂಸ್ಥೆ ವಿಜಯನಗರ ಬಸವೇಶ್ವರ ಬಡಾವಣೆಯಲ್ಲಿ 'ವಿದ್ಯುತ್ ಸಮಸ್ಯೆ ಹಾಗೂ ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಸೌರಶಕ್ತಿ ಪರ್ಯಾಯ ಇಂಧನ ಬಳಕೆ' ಕುರಿತ ಮಾಹಿತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಸೌರ ವಿದ್ಯುತ್ ಉತ್ಪಾದನಾ ಘಟಕವನ್ನು ಕಲ್ಯಾಣ್ ಹೌಸಿಂಗ್ ಸಹಕಾರ ಸಂಘದ ಅಧ್ಯಕ್ಷ ಮಾದಪ್ಪ ಉದ್ಘಾಟಿಸಿದರು. ಬಿಬಿಎಂಪಿ ಸದಸ್ಯ ಡಾ.ರಾಜು, ದತ್ತಾನಂದ ಶೆಟ್ಟಿ ಇತರರು ಇದ್ದರು.

---

Kannada Prabha 26/12/16

### ಪರೀಕ್ಷೆಗೆ ಅರ್ಜಿ ಆಹ್ವಾನ

**ಬೆಂಗಳೂರು:** 2016-17ನೇ ಸಾಲಿನ ವಿದ್ಯುತ್ ಮೇಲ್ವಿಚಾರಕರ ಸಾಮಾನ್ಯ ಮತ್ತು ಗಣಿ ಮತ್ತು ತಂತಿ ಕೆಲಸಗಾರರ ರಹದಾರಿ ನೀಡುವ ಪರೀಕ್ಷೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಜ.21ರೊಳಗೆ ಅರ್ಜಿ ಪಡೆದು ಭರ್ತಿಗೊಳಿಸಿ ಆಯಾ ಜಿಲ್ಲೆ ಅಥವಾ ಕ್ಷೇತ್ರೀಯ ಉಪ ವಿದ್ಯುತ್ ಪರಿವೀಕ್ಷಕರಿಗೆ ಫೆ.4ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ನಿರ್ಮಾಣ ಭವನ, 2ನೇ ಮಹಡಿ, ಡಾ. ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ ಇಲ್ಲಿ ಸಂಪರ್ಕಿಸಲು ಕೋರಲಾಗಿದೆ.

Udayavani - P-5 - 26/12/16

ಯ ಶ ವ ಟ್ಟು

# ಕೆಪಿಟಿಸಿಎಲ್ ಎಇಇ ಪರೀಕ್ಷೆಯಲ್ಲಿ ದೋಷ

## ■ ಒಂದೇ ಮಾದರಿ ಪ್ರಶ್ನೆಪತ್ರಿಕೆಯಿಂದ 50 ಪ್ರಶ್ನೆಗಳ ಬಳಕೆ ■ ಮರುಪರೀಕ್ಷೆಗೆ ಅಭ್ಯರ್ಥಿಗಳ ಆಗ್ರಹ

■ **ವಿಜಯಕುಮಾರ್ ಚಂದರಗಿ**

**ಬೆಂಗಳೂರು:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು (ಕೆಪಿಟಿಸಿಎಲ್) ವಿವಿಧ ಇಂಜಿನಿಯರಿಂಗ್ ಹುದ್ದೆಗಳಿಗೆ ಶನಿವಾರ ನಡೆಸಿದ ಆನ್‌ಲೈನ್ ಪ್ರಶ್ನೆಪತ್ರಿಕೆಯಲ್ಲಿ ಹಲವಾರು ತಾಂತ್ರಿಕ ದೋಷಗಳು ಕಂಡುಬಂದಿದ್ದು, ಇಡೀ ಪ್ರಶ್ನೆಪತ್ರಿಕೆಯಲ್ಲಿ ಶೇ. 50ರಷ್ಟು ಪ್ರಶ್ನೆಗಳನ್ನು ಆಂಧ್ರಪ್ರದೇಶ ಮೂಲದ ಒಂದೇ ತರಬೇತಿ ಸಂಸ್ಥೆಯಿಂದ ಯಥಾವತ್ತಾಗಿ ಭಟ್ಟಿ ಇಳಿಸಲಾಗಿದೆ ಎಂಬ ಆರೋಪ ಕೇಳಿಬಂದಿದೆ.

ಸಹಾಯಕ ಕಾರ್ಯನಿರ್ವಹಣಾ ಇಂಜಿನಿಯರ್ (ಎಲೆಕ್ಟ್ರಿಕ್)ನ 48ರಿಂದ 50 ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಹತ್ತು ಸಾವಿರಕ್ಕೂ ಅಧಿಕ ಅಭ್ಯರ್ಥಿಗಳು ಶನಿವಾರ ಆಯೋಜಿಸಿದ್ದ ಆನ್‌ಲೈನ್ ಪರೀಕ್ಷೆ ಬರೆದಿದ್ದಾರೆ. ಆದರೆ, ಪರೀಕ್ಷೆಯಲ್ಲಿದ್ದ ನೂರು ಪ್ರಶ್ನೆಗಳ ಪೈಕಿ ಹೆಚ್ಚು-ಕಡಿಮೆ 50 ಪ್ರಶ್ನೆಗಳನ್ನು ಆಂಧ್ರಪ್ರದೇಶ ಮೂಲದ ಒಂದು ತಾಂತ್ರಿಕ ಸಂಸ್ಥೆ ಹೊರತಂದ ಮಾದರಿ ಪ್ರಶ್ನೆಪತ್ರಿಕೆಯಿಂದಲೇ ಭಟ್ಟಿ ಇಳಿಸಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಇದು ಹಲವು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿದೆ.

ಸಾಮಾನ್ಯವಾಗಿ ಎಇಇ (ಸಹಾಯಕ ಕಾರ್ಯನಿರ್ವಹಣಾ ಇಂಜಿನಿಯರ್) ಪರೀಕ್ಷೆಗಳನ್ನು ಆಯೋಜಿಸುವಾಗ 35ರಿಂದ 40 ವಿಷಯಗಳಿಂದ ಪ್ರಶ್ನೆಗಳನ್ನು ಹೆಕ್ಕಿತೆಗೆದು, ಪ್ರಶ್ನೆಪತ್ರಿಕೆ ಸಿದ್ಧಪಡಿಸಲಾಗಿರುತ್ತದೆ. ಆದರೆ ಕೆಪಿಟಿಸಿಎಲ್, ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಸಹಯೋಗದಲ್ಲಿ ಸಿದ್ಧಪಡಿಸಿದ ಪ್ರಶ್ನೆಪತ್ರಿಕೆಯಲ್ಲಿ ಇಂತಹ ಯಾವುದೇ ಕಸರತ್ತು ಕಂಡುಬಂದಿಲ್ಲ. ಅಷ್ಟಕ್ಕೂ ಒಂದೇ ತರಬೇತಿ ಸಂಸ್ಥೆಯ ಮಾದರಿ ಪ್ರಶ್ನೆಪತ್ರಿಕೆಯಿಂದ ಶೇ. 50ರಷ್ಟು ಪ್ರಶ್ನೆಗಳನ್ನು ಯಥಾವತ್ತಾಗಿ ನಕಲು ಮಾಡುವ ಅನಿವಾರ್ಯತೆ ಏನಿತ್ತು? ಎಂದು ಅಭ್ಯರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಇಷ್ಟೇ ಅಲ್ಲ, ಪ್ರಶ್ನೆಪತ್ರಿಕೆಯಲ್ಲಿ ಹಲವು ತಾಂತ್ರಿಕ ದೋಷಗಳೂ ಇವೆ. ನಾಲ್ಕೈದು ಪ್ರಶ್ನೆಗಳು ಪುನರಾವರ್ತಿತ ಆಗಿವೆ. ಒಂದು ಪ್ರಶ್ನೆಗೆ ನೀಡಲಾಗುವ ನಾಲ್ಕು ಆಯ್ಕೆಗಳ ಪೈಕಿ ಹಲವೆಡೆ ಎರಡು ಆಯ್ಕೆಗಳು ಒಂದೇ ಆಗಿದ್ದವು. ಅಕ್ಷರಗಳಲ್ಲೂ ದೋಷಗಳಿದ್ದವು. ಸಾಮಾನ್ಯಜ್ಞಾನದ ಪ್ರಶ್ನೆಗಳಲ್ಲಿ ಮ್ಯಾನೇಜ್‌ಮೆಂಟ್‌ಗೆ ಸಂಬಂಧಿಸಿದ್ದವು ಆಗಿವೆ. ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಿಸಿದ ಪ್ರಶ್ನೆಗಳಂತೂ ಇರಲೇ ಇಲ್ಲ ಎಂದು ಹೆಸರು ಹೇಳಲಿಚ್ಛಿಸದ ಕೆಪಿಟಿಸಿಎಲ್‌ನಲ್ಲೇ ಕಿರಿಯ ಇಂಜಿನಿಯರ್ ಕೂಡ ಆಗಿರುವ ಅಭ್ಯರ್ಥಿಯೊಬ್ಬರು ತಿಳಿಸಿದ್ದಾರೆ. ಅಲ್ಲದೆ, ಆಂಧ್ರ ಮೂಲದ ತರಬೇತಿ ಸಂಸ್ಥೆಯಿಂದ ಎರವಲು ಪಡೆದ ಪ್ರಶ್ನೆಗಳ ಮಾದರಿ ಪ್ರಶ್ನೆಪತ್ರಿಕೆ 'ಉದಯವಾಣಿ'ಗೆ ಲಭ್ಯವಾಗಿದೆ.

ಕೇವಲ ಪ್ರಶ್ನೆಪತ್ರಿಕೆ ಓದಿಕೊಂಡು ಪರೀಕ್ಷೆ ಬರೆಯುವವರಿಗೆ ಇದು ಅನುಕೂಲ ಆಗಬಹುದು. ಆದರೆ, ಪಠ್ಯಗಳನ್ನು ಓದಿ ಪರೀಕ್ಷೆಗೆ ಹಾಜರಾದವರಿಗೆ ಕಷ್ಟ.

ಒಂದಿಷ್ಟು ಪ್ರಶ್ನೆಗಳಂತೂ ಎಲೆಕ್ಟ್ರಿಕ್ ಇಂಜಿನಿಯರಿಂಗ್‌ನ ಬೇಸಿಕ್ ಪ್ರಶ್ನೆಗಳಂತಿದ್ದವು. ಎಇಇ ಹುದ್ದೆಗೆ ತಕ್ಕನಾದ ಪ್ರಶ್ನೆಪತ್ರಿಕೆಯೇ ಆಗಿರಲಿಲ್ಲ. ಇದು ಕೆಲವರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದಲೇ ತಯಾರಾದ ಪ್ರಶ್ನೆಪತ್ರಿಕೆಯಂತಿದೆ. ಆದ್ದರಿಂದ ಮರುಪರೀಕ್ಷೆ ನಡೆಸಬೇಕು ಎಂದು ಅಭ್ಯರ್ಥಿಗಳು ಒತ್ತಾಯಿಸಿದ್ದಾರೆ.



■ ವಿವಿಧ ಇಂಜಿನಿಯರ್ ಹುದ್ದೆಗಳಿಗೆ ಶನಿವಾರ ಕೆಪಿಟಿಸಿಎಲ್‌ನಿಂದ ಆನ್‌ಲೈನ್ ಪರೀಕ್ಷೆ

■ ಶೇ. 50 ಪ್ರಶ್ನೆಗಳು ಆಂಧ್ರ ಮೂಲದ ಒಂದೇ ತರಬೇತಿ ಸಂಸ್ಥೆಯಿಂದ ಯಥಾವತ್ ಭಟ್ಟಿ ಆರೋಪ

### ವಾಟ್ಸ್‌ಆ್ಯಪ್‌ನಲ್ಲೂ ಹರಿದಾಟ

**ಮೂ**ರು ತಿಂಗಳ ಹಿಂದೆಯೇ ಎಇಇಗೆ ಅರ್ಜಿ ಆಹ್ವಾನಿಸಲಾಗಿತ್ತು. ಸೆಪ್ಟೆಂಬರ್ ಅಂತ್ಯಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿತ್ತು. ತದನಂತರದಿಂದ ಮೂರು ತಿಂಗಳು ಪ್ರಶ್ನೆಪತ್ರಿಕೆ ತಯಾರಿಕೆಗೆ ಕಾಲಾವಕಾಶ ಕೂಡ ಇತ್ತು. ಆದರೆ, ಪ್ರಶ್ನೆಪತ್ರಿಕೆ ವ್ಯವಸ್ಥಿತವಾಗಿ ರೂಪಿಸಿಲ್ಲದಿರುವುದು ಕಂಡುಬರುತ್ತದೆ ಎಂದು ಅಭ್ಯರ್ಥಿಗಳು ಆರೋಪಿಸಿದ್ದಾರೆ. ಈ ಸಂಬಂಧದ ಸಂದೇಶಗಳು ಮತ್ತು ಆಂಧ್ರ ಮೂಲದ ಸಂಸ್ಥೆಯೊಂದರ ಮಾದರಿ ಪ್ರಶ್ನೆಪತ್ರಿಕೆ ಕೂಡ ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿವೆ. ಕಾರ್ಯನಿರ್ವಹಣಾ ಇಂಜಿನಿಯರ್ (ಎಇ) ಹುದ್ದೆಗೂ ಶೀಘ್ರದಲ್ಲೇ ಪರೀಕ್ಷೆ ನಡೆಯಲಿವೆ. ಈ ಸಂಬಂಧ ಮಾಹಿತಿ ಮತ್ತು ಸ್ಪಷ್ಟನೆಗಾಗಿ ಹಲವು ಬಾರಿ ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸಲು 'ಉದಯವಾಣಿ' ಪ್ರಯತ್ನಿಸಿದರೂ ಸಂಪರ್ಕಕ್ಕೆ ಸಿಗಲಿಲ್ಲ.

Kannada Prabha 26/12/16

# ದ.ಭಾರತದ ಮೊದಲ ಕೆನಾಲ್ ಸೋಲಾರ್ ಯೋಜನೆ ಯಶಸ್ವಿ

## ಆಲಮಟ್ಟಿ ಬಲದಂಡೆ ಕಾಲುವೆ ಮೇಲೆ ಅಳವಡಿಕೆ | ₹11.43 ಕೋಟಿ ವೆಚ್ಚದಲ್ಲಿ ತಯಾರಾದ ಸೋಲಾರಿನಿಂದ 1ಮೆ.ವ್ಯಾ. ವಿದ್ಯುತ್ ಉತ್ಪಾದನೆ

• **ಕಿರಣ ಮಾಸಣಗಿ** ವಿಜಯಪುರ (ಆಲಮಟ್ಟಿ)

ಗುಜರಾತ್ ಅನ್ನು ಮಾದರಿಯಾಗಿಟ್ಟುಕೊಂಡು ನೀರಾವರಿ ಸೌಲಭ್ಯ ಮತ್ತು ನೈಸರ್ಗಿಕ ಶಕ್ತಿಗಳ ಸದ್ಬಳಕೆ ನಿಟ್ಟಿನಲ್ಲಿ ವಿಜಯಪುರದಲ್ಲಿ ಕೈಗೊಂಡ ಸೌರಶಕ್ತಿ ಯೋಜನೆ ಈಗ ದೇಶಕ್ಕೇ ಮಾದರಿಯಾಗಿ ಪರಿವರ್ತನೆಯಾಗಿದೆ. ದಕ್ಷಿಣ ಭಾರತದಲ್ಲೇ ಮೊದಲನೆಯದಾದ ಈ ಕೆನಾಲ್ ಸೋಲಾರ್ ಯೋಜನೆ ಯಶಸ್ಸು ಇಂತಹ ಇನ್ನಷ್ಟು ಯೋಜನೆಗಳಿಗೆ ಪ್ರೇರಣೆಯಾಗುತ್ತಿದೆ.

ಯೋಜನೆಯಡಿ ಆಲಮಟ್ಟಿ ಬಲದಂಡೆ ಕಾಲುವೆ ಮೇಲೆ 8ನೇ ಕಿ.ಮೀ ನಿಂದ 11ನೇ ಕಿ.ಮೀವರೆಗೆ ಸೌರಫಲಕ ಅಳವಡಿಸಲಾಗಿದೆ. ವಿಜಯಪುರ ಜಿಲ್ಲೆಯಲ್ಲಿ ಬಿಸಿಲಿನ ತೀವ್ರತೆ ಹೆಚ್ಚು, ಇದರಿಂದ ನೀರಿನ ಆವಿಯಾಗುವಿಕೆ ಪ್ರಮಾಣವೂ ಜಾಸ್ತಿ. ಇದರ ತಡೆಗೆ ಕಾಲುವೆ ಮೇಲೆ ಸೌರಫಲಕ ಅಳವಡಿಕೆಗೆ ಮುಂದಾಗಿದ್ದು, ಈ ಮೂಲಕ ನೀರನ್ನು ಉಳಿಸುವ ಜತೆಗೆ ವಿದ್ಯುತ್ ಉತ್ಪಾದಿಸುವ ಹೊಸ ಮಾದರಿಗೆ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮುಂದಾಗಿದೆ ಎಂದು ಕೃಷ್ಣಾ ಕಾಡಾದ ಕಾರ್ಯಪಾಲಕ ಅಭಿಯಂತರ ತಿರುಮೂರ್ತಿ ಮಾಹಿತಿ ನೀಡಿದರು.



ಆಲಮಟ್ಟಿ ಬಲದಂಡೆ ಕಾಲುವೆ ಮೇಲೆ ಅಳವಡಿಸಲಾಗಿರುವ ಸೋಲಾರ್ ಪ್ಯಾನಲ್

ಈ ಕಾಲುವೆಗಳು 9 ಮೀ ಅಗಲವಿದ್ದು, ಅದರ ಮೇಲೆ ಸುಮಾರು 12 ಮೀ ಅಗಲ ಹಾಗೂ 700 ಮೀಟರ್ ಉದ್ದದವರೆಗೆ 3280 ಸೌರಫಲಕಗಳನ್ನು ಅಳವಡಿಸಲಾಗಿದೆ. ಈ ಸೌರಫಲಕಗಳಿಂದ ಪ್ರತಿನಿತ್ಯ 4000-6000 ಯುನಿಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಪ್ರತಿದಿನ 25ರಿಂದ 27ಡಿಗ್ರಿ ಸಾಮಾನ್ಯ ಉಷ್ಣಾಂಶದಿಂದ ಇದು ಸಾಧ್ಯವಾಗುತ್ತಿದ್ದು, ಅತಿ ಹೆಚ್ಚಿನ ಪ್ರಖರತೆ ಇದ್ದಾಗಲೂ ಗರಿಷ್ಠ 1 ಮೆಗಾ ವ್ಯಾಟ್ (10ಸಾವಿರ ಯುನಿಟ್)ನಷ್ಟು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಈ ಯೋಜನೆಗಿದೆ.

### ಕೊಪ್ಪಳದಲ್ಲೂ ಆರಂಭಿಸಲು ಚಿಂತನೆ

ವಿಜಯಪುರದಲ್ಲಿ ಸಿಕ್ಕ ಯಶಸ್ಸನ್ನು ಕಂಡು ಇದೇ ಮಾದರಿಯನ್ನು ಕೊಪ್ಪಳ ಏತ ನೀರಾವರಿ ಯೋಜನೆಯ 10ನೇ ಕಿ.ಮೀನಲ್ಲಿ ಅಳವಡಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಆದರೆ ಅದು ಬೃಹತ್ ಯೋಜನೆಯಾಗಿದ್ದು, ಅದರ ಸಾಮರ್ಥ್ಯ 10 ಮೆಗಾವ್ಯಾಟ್‌ಗೆ (1 ಲಕ್ಷ ಯುನಿಟ್) ಹೆಚ್ಚಿಸಲು ಚಿಂತನೆ ನಡೆಸಿದೆ.

**ಬರದ ನಾಡು ಎಂಬ ಹೆಸರಿನಿಂದ ವಿಜಯಪುರ ಜಿಲ್ಲೆ ಸೇರಿ ಸುತ್ತಲಿನ ಕೆಲ ಜಿಲ್ಲೆಗಳಲ್ಲಿ ನೀರಾವರಿ ಕ್ರಾಂತಿಗೆ ಸಚಿವ ಎಂ.ಬಿ.ಪಾಟೀಲ ನಾಂದಿ ಹಾಡಿದ್ದಾರೆ. ಕಾಮಗಾರಿಗಳಿಗೆ ತೀವ್ರತೆ ನೀಡಿದ್ದಾರೆ. ಸೋಲಾರ್ ಪ್ರಾಜೆಕ್ಟ್‌ಗೆ ಹೆಚ್ಚಿನ ಆದ್ಯತೆ ಕೊಟ್ಟಲ್ಲಿ ರಾಜ್ಯದ ವಿದ್ಯುತ್ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು.**

• **ತಿರುಮೂರ್ತಿ** ಕೃಷ್ಣಾ ಕಾಡಾದ ಕಾರ್ಯಪಾಲಕ ಅಭಿಯಂತರ

ಉತ್ಪಾದನೆಗೊಂಡ ಈ ವಿದ್ಯುತ್ ಅನ್ನು ಸುತ್ತಲಿನ 12 ಹಳ್ಳಿಗಳಿಗೆ ನೀಡಲು ಆರಂಭದಲ್ಲಿ ಯೋಜನೆ ರೂಪಿಸಲಾಗಿತ್ತು. ನಂತರದಲ್ಲಿ ಕ್ಯಾಪ್ಟಿವ್ ಬೇಸಿಸ್ (ನೀಡಿದಷ್ಟು ಬಿಲ್ ಕಡಿತದ) ಆಧಾರದ ಮೇಲೆ ಇಲ್ಲಿ ಉತ್ಪಾದನೆಗೊಳ್ಳುವ ವಿದ್ಯುತ್ ಅನ್ನು ಸಮೀಪದಲ್ಲಿರುವ ಹೆಸ್ಕಾಂನ ರಾಂಪುರ ಸಬ್‌ಸ್ಟೇಷನ್‌ಗೆ ನೀಡಲಾಗುತ್ತಿದೆ. ಅಂದರೆ ಆಲಮಟ್ಟಿ ಎಡ ಮತ್ತು ಬಲದಂಡೆ ಕಾಲುವೆಗಳಿಗೆ ನೀರು ಪಂಪ್ ಮಾಡಲು ವಿದ್ಯುತ್ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಅಲ್ಲಿ ಬಳಸುವ ವಿದ್ಯುಚ್ಛಕ್ತಿಯ ಒಟ್ಟು ಬಿಲ್‌ನಲ್ಲಿ ಈ ಸೋಲಾರ್ ಪವರ್ ಪ್ರಾಜೆಕ್ಟ್‌ನಿಂದ ಉತ್ಪಾದನೆಗೊಂಡು ಹೆಸ್ಕಾಂಗೆ ನೀಡಲಾಗುವ ಯುನಿಟ್‌ನಷ್ಟು ಕಡಿತ ಮಾಡಿ ಉಳಿದಿರುವುದಕ್ಕೆ ಹೆಸ್ಕಾಂ ಬಿಲ್ ನೀಡುತ್ತಿದೆ. ಮುಂಬರುವ ದಿನಗಳಲ್ಲಿ ಉತ್ಪಾದನೆ ಹೆಚ್ಚಿದಲ್ಲಿ ಪ್ರತಿ ಯುನಿಟ್‌ಗೆ ₹3.60ರಂತೆ ಮೊತ್ತ ಪಾವತಿಸುವ ಕುರಿತು ಹೆಸ್ಕಾಂ ಜತೆಗೆ ಒಡಂಬಡಿಕೆಯನ್ನೂ ಮಾಡಿಕೊಳ್ಳಲಾಗಿದೆ. 2015ರ ಜೂ.9ರಂದು ಈ ಯೋಜನೆಗೆ ಚಾಲನೆ ನೀಡಲಾಗಿದ್ದು, ಈವರೆಗೂ 14 ಲಕ್ಷ ಯುನಿಟ್ ವಿದ್ಯುತ್ ಉತ್ಪಾದಿಸಲಾಗಿದೆ.

ಗುಜರಾತಿನ ಅಹಮದಾಬಾದ್‌ನಲ್ಲಿ 1 ಮೆ.ವ್ಯಾ. ಸಾಮರ್ಥ್ಯದ ಕೆನಾಲ್ ಟಾಪ್ ಸೋಲಾರ್ ಪ್ರಾಜೆಕ್ಟ್ ಕೈಗೊಳ್ಳಲಾಗಿದ್ದು, ಅದೇ ಮಾದರಿಯನ್ನು ಇಲ್ಲಿ ಅನುಸರಿಸಲಾಗಿದೆ. ಆದರೆ ಅಹಮದಾಬಾದ್ ಯೋಜನೆಗೆ ₹17 ಕೋಟಿ ವೆಚ್ಚವಾಗಿದ್ದರೆ, ವಿಜಯಪುರದ ಈ ಯೋಜನೆಗೆ ₹11.43 ಕೋಟಿ ವೆಚ್ಚವಾಗಿದೆ.